**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1.**

ಸಂಖ್ಯೆ:ಸಿ4(2): ಪ್ರೌ.ಶಿ.ಜೇ.ಪಟ್ಟಿ/12/2010-11 ದಿನಾಂಕ17-12-2012

## ಸುತ್ತೋಲೆ

ವಿಷಯ: ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2, ದಿನಾಂಕ:01-01-2008 ರಿಂದ 31-12-2010 ರವರೆಗೆ ಪ್ರಕಟಿಸಲಾಗಿರುವ ಸಹ ಶಿಕ್ಷಕರು ಗ್ರೇಡ್-1 ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಹ ಶಿಕ್ಷಕರ ನೇಮಕಾತಿ ಪ್ರಾಧಿಕಾರಿಯಾದ ಉಪನಿರ್ದೇಶಕರ ಹಂತದಲ್ಲಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ ಅಂತಿಮಗೊಳಿಸಿ ಈ ಕಛೇರಿಗೆ ಸಲ್ಲಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 59 SRE 2002: 24-06-2003
2) ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು-1957
3) ಈ ಕಛೇರಿಯ ಅಧಿಸೂಚನೆ ದಿನಾಂಕ:12:2010-11 ದಿ:23-01-2012
4) ಈ ಕಛೇರಿಯ ಸಮಸಂಖ್ಯೆ ಜ್ಞಾಪನಾ ದಿನಾಂಕ:29-08-2012
5) ಈ ಕಛೇರಿಯ ಸಮಸಂಖ್ಯೆ ಜ್ಞಾಪನಾ ದಿನಾಂಕ:20-10-2012

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ಉಲ್ಲೇಖಿತ ಸರ್ಕಾರದ ಅಧಿಸೂಚನೆಯನ್ವಯ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ **ನೇಮಕಾತಿ ಪ್ರಾಧಿಕಾರ** ಜಿಲ್ಲಾ ಉಪನಿರ್ದೇಶಕರಾಗಿರುವುದರಿಂದ, ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-1, ವೃಂದದಡಿಯಲ್ಲಿ ನೇಮಕಗೊಂಡು (ಬಡ್ತಿ ಸೇರಿದಂತೆ) (ಸಹಶಿಕ್ಷಕರು/ಬಿಆರ್‌ಪಿ/ಶಿಕ್ಷಣ ಸಂಯೋಜಕರು/ಪದವೀಧರ ಮುಖ್ಯಶಿಕ್ಷಕರು/ತಾಂತ್ರಿಕ/ಶೈಕ್ಷಣಿಕ ಸಹಾಯಕರು) ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು-1957 ರ ನಿಯಮ-10"** ರಂತೆ ಸಿದ್ಧಪಡಿಸಿ ಸಲ್ಲಿಸಿದ ಮೇರೆಗೆ ಉಲ್ಲೇಖ (3)ರ ಈ ಕಛೇರಿಯ ಅಧಿಸೂಚನೆಯಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಅಂತಿಮಗೊಳಿಸಲಾಗಿದೆ.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಒಂದು ತಿಂಗಳ ಕಾಲಾವಕಾಶ ನೀಡಿ, ಬಾಧಿತ ಶಿಕ್ಷಕರಿಂದ ಆಕ್ಷೇಪಣೆಗಳನ್ನು ಪಡೆದು ಕ್ರೋಡೀಕರಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು **ದಿನಾಂಕ:30.03.2011 ರೊಳಗಾಗಿ** WWW.schooleducation.kar.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ನಿಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸಹಾ ಸೂಚಿಸಲಾಗಿತ್ತು.ಇದಲ್ಲದೆ ಉಲ್ಲೇಖ (5) ರಲ್ಲಿ ದಿನಾಂಕ:31-12-2007 ರ ಅಂತ್ಯಕ್ಕೆ ಪ್ರಕಟಿಸಲಾದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ತಿದ್ದುಪಡಿಗಳು ಮತ್ತು ಬಿಟ್ಟುಹೋಗಿರುವ ಪ್ರಕರಣಗಳು ಹಾಗೂ ದಿನಾಂಕ:01-08-2008 ರಿಂದ 31-12-2010 ರವರೆಗೆ ಪ್ರಕಟಿಸಲಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂದಿಸಿದಂತೆ ಶಿಕ್ಷಕರಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ತಿದ್ದುಪಡಿಗಳು ಇದ್ದಲ್ಲಿ ಅವುಗಳನ್ನು ನಿಮ್ಮ ಹಂತದಲ್ಲ ಪರಿಶೀಲಿಸಿ ದಿನಾಂಕ:10-01-2013 ರೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. **ಜೇಷ್ಠತಾ ಪಟ್ಟಿಯನ್ನು ತುರ್ತಾಗಿ ಅಂತಿಮಗೊಳಿಸಬೇಕಾಗಿರುವುದರಿಂದ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯು ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕರಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ಅಧಿಸೂಚನೆಯನ್ನು ಹೊರಡಿಸಿದ್ದು,** ಈ ಹಿನ್ನೆಲೆಯಲ್ಲಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವಾಗ ಎಲ್ಲಾ ರೀತಿಯಲ್ಲಿ ಅಂದರೆ, ಶಿಕ್ಷಕರ ವಿದ್ಯಾರ್ಹತೆ, ಉನ್ನತ ವ್ಯಾಸಂಗ ವಿವರಗಳು, ಜನ್ಮದಿನಾಂಕ, ಸೇವೆಗೆ ಸೇರಿದ ದಿನಾಂಕ ಇತ್ಯಾದಿ ಅಂಶಗಳನ್ನು ಶಿಕ್ಷಕರ ಸೇವಾಪುಸ್ತಕದೊಂದಿಗೆ ಪರಿಶೀಲಿಸಿ ಅಂತಿಮಗೊಳಿಸುವುದು ಹಾಗೂ ಶಿಕ್ಷಕರ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ಪುರಸ್ಕರಿಸುವುದು.

ಪ್ರಸ್ತುತ, ನೀವು ಸಿದ್ಧಪಡಿಸಿದ ಅಂತಿಮ ಜೇಷ್ಠತಾ ಪಟ್ಟಿಗಳ ಆಧಾರದ ಮೇಲೆ ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯ ಸಂಯುಕ್ತೀಕರಿಸಿದ ಜೇಷ್ಠತಾ ಪಟ್ಟಿ **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು-1957 ರ ನಿಯಮ-7(ಎ)"** ರ ಪ್ರಕಾರ ಸಿದ್ಧಪಡಿಸಿ ಅಂತಿಮಗೊಳಿಸಬೇಕಾಗಿರುವುದರಿಂದ ಸದರಿ ಜೇಷ್ಠತಾ ಪಟ್ಟಿಗಳ **ಸಾಫ್ಟ್ ಮತ್ತು ಹಾರ್ಡ್ ಕಾಪಿಯ** ಪ್ರತಿಯೊಂದಿಗೆ ಉಪನಿರ್ದೇಶಕರ ಕಛೇರಿಯ ಸಂಬಂದಿಸಿದ ಅಧೀಕ್ಷಕರು ಹಾಗೂ ವಿಷಯನಿರ್ವಾಹಕರನ್ನು ನಿಮ್ಮ ಜಿಲ್ಲೆಗೆ ನಿಗದಿಪಡಿಸಿದ ದಿನಾಂಕದಂದು ಈ ಕಛೇರಿಗೆ ಅಪ್‌ಲೋಡ್ ಮಾಡಲು ನಿಯೋಜಿಸುವುದು.

| ಕ್ರ. ಸಂ. | ಜಿಲ್ಲೆಯ ಹೆಸರು | ನಿಗದಿಡಪಿಸಿದ ದಿನಾಂಕ | ಕ್ರ. ಸಂ. | ಜಿಲ್ಲೆಯ ಹೆಸರು | ನಿಗದಿಪಡಿಸಿದ ದಿನಾಂಕ |
|---|---|---|---|---|---|
| 01 | ಬೆಂಗಳೂರು ಉತ್ತರ | 27-12-2012 | 02 | ಬೆಂಗಳೂರು ದಕ್ಷಿಣ | 28-12-2012 |
| 03 | ಬೆಂಗಳೂರು ಗ್ರಾಮಾಂತರ | 29-12-2012 | 04 | ರಾಮನಗರ | 02-01-2013 |
| 05 | ಕೋಲಾರ | 03-01-2013 | 06 | ಮಧುಗಿರಿ | 04-01-2013 |
| 07 | ಚಿಕ್ಕಬಳ್ಳಾಪುರ | 05-01-2013 | 08 | ತುಮಕೂರು | 07-01-2013 |
| 09 | ಶಿವಮೊಗ್ಗ | 08-01-2013 | 10 | ದಾವಣಗೆರೆ | 09-01-2013 |
| 11 | ಚಿತ್ರದುರ್ಗ | 10-01-2013 | 12 | ಮೈಸೂರು | 11-01-2013 |
| 13 | ಚಾಮರಾಜನಗರ | 16-01-2013 | 14 | ಮಂಡ್ಯ | 17-01-2013 |
| 15 | ಹಾಸನ | 18-01-2013 | 16 | ಚಿಕ್ಕಮಗಳೂರು | 19-01-2013 |
| 17 | ಕೊಡಗು | 21-01-2013 | 18 | ದಕ್ಷಿಣ ಕನ್ನಡ | 22-01-2013 |
| 19 | ಉಡುಪಿ | 23-01-2013 | - | - | - |

ಜೇಷ್ಠತಾ ಪಟ್ಟಿ ಮತ್ತು ಅರ್ಹ ಕ್ರೋಡಿಕೃತ ಮಾಹಿತಿಯನ್ನು ಸಂಬಂದಿಸಿದ ಜಿಲ್ಲಾ ಉಪನಿರ್ದೇಶಕರು ಧೃಡೀಕರಿಸುವುದು. ಯಾವುದೆ ಶಿಕ್ಷಕರನ್ನು ಕೈ ಬಿಡದಂತೆ ಎಚ್ಚರಿಕೆ ವಹಿಸುವುದು.

ಈ ಕಾರ್ಯವನ್ನು ಆಧ್ಯತೆ ಮೇರೆಗೆ ಪರಿಗಣಿಸಿ ಕ್ರಮ ಕೈಗೊಂಡು ಆಯಾ ಜಿಲ್ಲೆಗಳಿಗೆ ನಿಗದಿಪಡಿಸಿದ ದಿನಾಂಕಗಳಂದು ಈ ಕಛೇರಿಗೆ ಖುದ್ದು ಹಾಜರಾಗಿ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲು ಸೂಚಿಸಿದೆ.

**(ಎನ್.ಬಿ.ಪಾಟೀಲ್)**

**ನಿರ್ದೇಶಕರು (ಪ್ರೌಢಶಿಕ್ಷಣ)**

**ಇವರಿಗೆ**

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ತುರ್ತು ಕ್ರಮಕ್ಕಾಗಿ.

**ಪ್ರತಿಯನ್ನು:**

1. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ಮಾಹಿತಿಗಾಗಿ
2. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ ಮಾಹಿತಿಗಾಗಿ
3. ಕಡತ ಪ್ರತಿ.